

# ಅರಿವೆಯ ಅರಿವು ಕಾಟನ್ ಸೀರೆಗಳ ಮೆರುಗು!

ಸಿನಿಮಾದಲ್ಲಿ ಮಿಂಚುವ ನಟಿಮಣಿಯರಿಂದ ಹಿಡಿದು ಸಂಸತ್ತಿನಲ್ಲಿ ಗರ್ಜಿಸುವ ನಾಯಕಿಯರು, ಆಡಳಿತ ನಡೆಸುವ ಅಧಿಕಾರಿಗಳು, ಹದಿಹರೆಯದ ಹುಡುಗಿಯರು ಎಲ್ಲರೂ ಮಾರುಹೋಗಿರುವುದು ಈ ಕಾಟನ್ ಸೀರೆಗೆ. ಸರಳ ಎನಿಸಿದರೂ ಇದಕ್ಕಿರುವ ಮಾಡರ್ನ್ ಲುಕ್‌ನ ಛಾಪು ಹೆಚ್ಚೆಚ್ಚು ಜನರನ್ನು ಆಕರ್ಷಿಸುತ್ತಿದೆ.

■ **ಸುರೇಖಾ ಹೆಗಡೆ**

ಬಿಸಿಲು ಕಾವೇರಿದೆ. ಬೆವರು ಅನಾಯಾಸವಾಗಿ ತೋಯುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ರೇಷ್ಮೆ, ಲೆನಿನ್, ಜೀನ್ಸ್, ಟಿಶ್ಯೂ ಬಟ್ಟೆಗಳು ಮೈಗೆ ಭಾರವೆನಿಸಿವೆ. ದಿನವಿಡೀ ಅವುಗಳನ್ನು ತೊಟ್ಟು ನಿಭಾಯಿಸುವುದು ಎಂದರೆ ಸಹಿಸಲಾರದ ಕಿರಿಕಿರಿ. ಹೀಗಾಗಿಯೇ ಬೇಸಿಗೆ ಬಂತೆಂದರೆ ಹೆಚ್ಚಿನವರ ಆದ್ಯತೆ ಬದಲಾಗಿಬಿಡುತ್ತದೆ. ಕೈಮಗ್ಗದಲ್ಲಿ ತಯಾರಾದ ಹತ್ತಿ ಬಟ್ಟೆಯ ಕಡೆ ಮನಸ್ಸು ವಾಲುತ್ತದೆ. ಬೇಸಿಗೆ ಕಾಲದಲ್ಲಿ ಹತ್ತಿ ಬಟ್ಟೆಗಳ ಸ್ಪರ್ಶದಿಂದ ಸಿಗುವ ತಂಪು ಮಳೆಗಾಲದ ಮೊದಲ ಹನಿಯಷ್ಟೇ ಹಿತ, ಆಪ್ತ.

ಅಜ್ಜಿ ಪೆಟ್ಟಿಗೆಯಿಂದ ಜೆನ್ ಜಿ ವಾರ್ಡ್‌ರೋಬ್‌ವರೆಗೆ.

ಇಂದಿನ ಫ್ಯಾಷನ್ ಲೋಕಕ್ಕೆ ತಕ್ಕ ಹಾಗೆ ಹತ್ತಿ ಬಟ್ಟೆಯಲ್ಲಿ ನೂರಾರು ವಿಧದ ದಿರಿಸು ಮೈದಳೆದಿರಬಹುದು. ಆದರೆ, ಎಂದೂ ಮಾಸದ ಟ್ರೆಂಡ್ ಅಂದರೆ ಕಾಟನ್ ಸೀರೆಗಳದ್ದೇ. ಒಂದು ಕಾಲದಲ್ಲಿ ಅಜ್ಜಿಯರ ಪೆಟ್ಟಿಗೆಯಲ್ಲೋ, ಮದುಮಗಳ ಶೃಂಗಾರದಲ್ಲೋ ಕಾಟನ್ ಸೀರೆಗಳು ಇಣುಕುತ್ತಿದ್ದವು. ಆದರೆ ಈಗ ಕಾಲ ಬದಲಾಗಿದೆ. ಕಾಲೇಜು ಕನ್ಯೆಯರಿಂದ ಹಿಡಿದು ಕಾರ್ಪೊರೇಟ್ ದಿಗ್ಗಜರವರೆಗೆ, ಹದಿಹರೆಯದ ಜೆನ್ ಜಿ ತರುಣಿಯರಿಂದ ಹಿಡಿದು ವೃತ್ತಿಪರರವರೆಗೆ ಎಲ್ಲರೂ ಮಾರುಹೋಗಿರುವುದು ಅಪ್ಪಟ ಚೆಲುವಿನ ಕಾಟನ್ ಸೀರೆಗಳಿಗೆ. ನೋಡುಗರಿಗೆ ಸರಳ ಉಡುಗೆಯಂತೆ ಕಂಡರೂ ಧರಿಸಿದವರಿಗೆ ಇದು ಆಧುನಿಕ, ಕ್ಲಾಸಿ ಹಾಗೂ ಎಲಿಗೆಂಟ್ ಲುಕ್ ನೀಡುವುದರಿಂದ ಇದು ಹೆಚ್ಚು ಜನಪ್ರಿಯತೆ ಗಳಿಸಿದೆ.

## ಸರ್ವಕಾಲಕ್ಕೂ ಸೈ

ಕಾಟನ್ ಬಟ್ಟೆಗಳು ಸರ್ವಕಾಲಕ್ಕೂ ಸಲ್ಲುತ್ತವೆ. ಬೇಸಿಗೆಯ ಶಾಖಕ್ಕೆ ತಂಪಾಗಿಯೂ ಚಳಿಗಾಲದ ಚಳಿಗೆ ಬೆಚ್ಚನೆಯ ಅನುಭವವನ್ನೂ ಇವು ನೀಡಬಲ್ಲವು. ಹಗುರವಾದ, ಆರಾಮದಾಯಕ, 'ಬ್ರೀದಬಲ್' ಹಾಗೂ ಬೆವರನ್ನು ಹೆಚ್ಚಾಗಿ ಹೀರಿಕೊಳ್ಳುವ ಮಲ್ಮಲ್, ಬೆಂಗಾಲ್ ಕಾಟನ್, ಕೋಟಾ ಕಾಟನ್, ಲೆನಿನ್ ಕಾಟನ್, ಜಾಮ್ದಾನಿ, ಇಕ್ಕತ್, ಇಳಕಲ್ ಮುಂತಾದ ಬಗೆಯ ಸೀರೆಗಳು ಬೇಸಿಗೆಯ ಕಾಲಕ್ಕೆ, ಅದರಲ್ಲೂ ದೈನಂದಿನ ಬಳಕೆಗೆ ಹೇಳಿ ಮಾಡಿಸಿದಂತಿವೆ. ಮೊಳಕಾಲ್ಮುರು, ಬೆಟಗೇರಿ, ಚೆಟ್ಟಿನಾಡ್, ಖಾದಿ ಕಾಟನ್ ಸೀರೆಗಳು ತುಸು ದಪ್ಪ ಎನಿಸಿದರೂ ಸಾಂಪ್ರದಾಯಿಕ ಲುಕ್ ಕೊಡುವುದರ ಜೊತೆಗೆ ಆರಾಮದಾಯಕವಾಗಿಯೂ ಇರುತ್ತವೆ.

ರಾಜಕೀಯ, ಸಾಮಾಜಿಕ ಕಾರ್ಯಕರ್ತೆಯರು, ಐಎಎಸ್ ಅಧಿಕಾರಿಗಳು, ವೈದ್ಯರು, ಶಿಕ್ಷಕಿಯರೂ ಹೆಚ್ಚಾಗಿ ಕಾಟನ್ ಸೀರೆಗಳನ್ನೇ ಧರಿಸುತ್ತಾರೆ. ಅವರ ಈ ಆಯ್ಕೆಗೆ ಪ್ರಬಲ ಕಾರಣವೂ ಇಲ್ಲದಿಲ್ಲ. ಇತರ ಬಟ್ಟೆಗಳಿಗೆ ಹೋಲಿಸಿದರೆ ಈ ಸೀರೆ ದೀರ್ಘಕಾಲದವರೆಗೂ ಕಿರಿಕಿರಿಯಿಲ್ಲದೆ ಧರಿಸಬಹುದು. ಅಲ್ಲದೆ ಒಮ್ಮೆ ಸರಿಯಾಗಿ ನೆರಿಗೆ ಜೋಡಿಸಿ ಉಟ್ಟರೆ ಮುಂಜಾನೆಯಿಂದ ಸಂಜೆಯವರೆಗೂ ಜೋತು ಬೀಳದೆ, ಅಸ್ತವ್ಯಸ್ತವಾಗದೆ,

